ಪದಬಂಧ



ಎಡದಿಂದ ಬಲಕ್ಕೆ :

1. ಅಲ್ಲಿ ದಂಗೆ ಎದ್ದವರ ಸ್ಥಿತಿ ಅತ್ಯಂತ ಕೀಳು (4)
3. ಧಣಿಯೋ , ಮುನಿಯೋ ಒಂದೇ ರಕ್ತನಾಳ (3)
4. ಭಾರೀ ರಂಪವೇ ಆಯಿತು; ನಮ್ಮ ರಾಷ್ಟ್ರದ ದುಡ್ಡು (3)
6. ಆತ ಗಣಿ ತೋಡಿ ತೆಗೆದ ಸಂಪತ್ತು ಲೆಕ್ಕಕ್ಕೇ ಸಿಗದಷ್ಟು (4)
8. ಕತ್ತೆಗಳ ಜೊತೆಗೇ ತೂರಿ ಸಾಗುವಂತೆ ಅದೇನು ಆತುರ ? (4)
10. ಸದಾಚಾರಿಯದು ಯಾವಾಗಲೂ ತಪ್ಪೇ ಇಲ್ಲದ ಹಾದಿ (4)
12. ವಿದುರನಂತೆಯೇ ಶ್ರೇಷ್ಠ, ಆ ಹೊಸ ಅರಸ (4)
16. ಹೊಣೆಗಾರ ಬರುವ ವೇಳೆಗೇ ಕದ್ದದ್ದೆಲ್ಲ ಹಿಂದುಮುಂದು (3)
17. ಕಣ್ಣೀರು ಬಂತೇಕೆ? ಅದು ಕೇವಲ ಗೌರವದ ಉಡುಗೊರೆ (3)
18. ಎಲ್ಲವೂ ಮೂರ್ಖರ ಪಾಲಾದದ್ದು ಹಣೆಬರಹದ ಪರಿಣಾಮ (4)

ಮೇಲಿಂದ ಕೆಳಕ್ಕೆ :

1. ಅನ್ಯಥಾ ಚರ್ಚೆ ಏಕೆ? ಯಾವುದೂ ಶಾಶ್ವತವಲ್ಲ (3)
2. ತೃಪ್ತಿಯೇ ಇಲ್ಲವೆಂದರೆ ಭಿಕ್ಷೆ ಬೇಡುವುದೇ ಸರಿ (3)
3. ದಣಿವನ್ನೇ ಅರಿಯದ ಮಾತೆ, ಈ ನಮ್ಮ ಭೂಮಿ (3)
5. ಆತುರವಾಯಿತು. ಹಾಗಾಗಿ ಹಾರದ ಜೊತೆಗಿನ ಹೂಗುಚ್ಛ ತಲೆಕೆಳಕಾಯಿತು (3)
6. ಅವನಾಸೆಗಳನ್ನು ನೆರವೇರಿಸುವುದು ಶ್ರಮವೇನಿಲ್ಲ, ಬಿಡಿ (4)
7. ಆ ತರಹ ತೂರಿಕೊಳ್ಳಲು ಏಕಿಂಥ ಅವಸರ? (4)
8. ಕಳೆದು ಹೋದದ್ದೆಲ್ಲ ಅವನು ಮುಚ್ಚಿಟ್ಟಿದ್ದ ಕಳ್ಳ ದುಡ್ಡು (4)
9. ಮರೆತವರಂತೆ ನಟಿಸುವವರ ಕೆಲಸವೆಲ್ಲ ಬರೀ ಗುಟ್ಟು (4)
11. ದುರುಳರ ಹಣ ಪಡೆದವರ ಸ್ಥಿತಿ ಭಾರೀ ಭಯಂಕರ (3)
13. ತೀವ್ರ ವೇದನೆಯನ್ನು ಬಿಂಬಿಸುತ್ತಿದೆ ಆತನ ಮುಖ (3)
14. ಕುತೂಹಲ ಕೆರಳಿಸಿದವರ ಬಗೆಗೆ ವ್ಯಂಗ್ಯದ ಮಾತೇಕೆ ? (3)
15. ಕರೆ ಕಳಿಸಲು ತುಂಬ ಸರಿಯಾದ ಸಮಯ ಈಗ (3)

## 15-12-2016ರ ಉತ್ತರಗಳು

ಎಡದಿಂದ ಬಲಕ್ಕೆ:

1. ವಿದಾಯ 3. ವಿಶೇಷ 4.ಜಳಕ 6. ಯಮುನ 7. ಅನುನಯ 9. ದಶದಿನ 11. ನವಮಾನ 13. ತಿರುನಾಮ 15. ಆರ್ದ್ರತೆ 17. ಕಲ್ಯಾಣ 18. ರಸನ 19. ತಿಳಿವು

ಮೇಲಿಂದ ಕೆಳಕ್ಕೆ:

1. ವಿಷಯ 2. ಯಜನ 3. ವಿಲೀನ 5. ಕರ್ಕಶ 7. ಅನುಮಾನ 8.ಯಕ್ಷಗಾನ 9. ದಳಪತಿ 10. ನರಾಧಮ 12. ಮಾಲೀಕ 14. ರುಜಿನ 15. ಆಣತಿ 16. ತೆರವು

ಪ್ರಶ್ನಾ ಂಕಣ

# ಡೋಡೋ: ಏಕೆ ಪ್ರಸಿದ್ಧ?

ಡೋಡೋ ಅದೊಂದು ಹಕ್ಕಿ. ಈಗ್ಗೆ ಮುನ್ನೂರು ವರ್ಷಗಳಿಗೂ ಹಿಂದೆಯೇ ಸಂಪೂರ್ಣ ಅಳಿದು ಹೋಗಿದ್ದರೂ ಈಗಲೂ ಪ್ರಸಿದ್ಧವಾಗಿಯೇ ಉಳಿದಿರುವ ಹಕ್ಕಿ ಅದು. ಮನುಷ್ಯರ ವಿನಾಶಕರ ಸಾಮರ್ಥ್ಯದ ಪ್ರತಿಮೆಯಾಗಿ ಈ ಹಕ್ಕಿ ಸುಪ್ರಸಿದ್ಧ. ಪರಿಪೂರ್ಣ ನಾಮಾವಶೇಷವಾಗಿರುವ ಯಾವುದೇ ಅಂಶವನ್ನು ದೃಢಪಡಿಸಲು ಜಗದಾದ್ಯಂತ ಬಳಕೆಯಲ್ಲಿರುವ ' ಡೋಡೋ ದಂತೆ ಮೃತ '(as dead as Dodo) ಎಂಬ ಅತ್ಯಂತ ಜನಪ್ರಿಯ ನುಡಿಗಟ್ಟಿಗೂ ಈ ಹಕ್ಕಿಯೇ ಮೂಲ.

ಧರೆಯಲ್ಲಿ ಮಾನವರ ಹಾವಳಿಯಿಂದಾಗಿಯೇ ನಿರ್ನಾಮಗೊಂಡಿರುವ ಹಕ್ಕಿ ವಿಧಗಳು ಹಲವಾರಿವೆ : ನ್ಯೂಜಿಲೆಂಡ್ ನಲ್ಲಿದ್ದ ಬೃಹತ್ ಹಕ್ಕಿ ' ಮೋವಾ '(ಚಿತ್ರ 1), ಮಡಗಾಸ್ಕರ್ ನ 'ಆನೆ ಹಕ್ಕಿ', ಉತ್ತರ ಅಟ್ಲಾಂಟಿಕ್ ನ ' ದಿ ಗ್ರೇಟ್ ಆಕ್ ', ಉತ್ತರ ಅಮೆರಿಕದ 'ಪ್ಯಾಸೆಂಜರ್ ಪಾರಿವಾಳ ', ಇತ್ಯಾದಿ. ಆದರೆ ಏಕಾಂಗಿಯಾದ ಏಕೈಕ ದ್ವೀಪದಲ್ಲಿದ್ದು, ಲಕ್ಷಾಂತರ ವರ್ಷಗಳಿಂದ ಸುರಕ್ಷಿತವಾಗಿ ಉಳಿದಿದ್ದು, ಸಮೃದ್ಧ ಸಂಖ್ಯೆಯಲ್ಲಿದ್ದು, ಹಾಗೆಲ್ಲ ಇದ್ದೂ ಮನುಷ್ಯರ ಕಣ್ಣಿಗೆ ಕಂಡ ನಂತರ ಅತ್ಯಂತ ಕಡಿಮೆ ಕಾಲದಲ್ಲಿ ಸಂಪೂರ್ಣ ನಿಶ್ಶೇಷಗೊಂಡ ವಿಶ್ವ ದಾಖಲೆಯಿಂದ ಈ ಹಕ್ಕಿ ಪ್ರಸಿದ್ಧ (ಚಿತ್ರ 2).

ಡೋಡೋ (ಚಿತ್ರ 2) ವಾಸ್ತವವಾಗಿ ಪಾರಿವಾಳದ ಗುಂಪಿಗೆ ಸೇರಿದ ಹಕ್ಕಿ. ಹಿಂದೂ ಮಹಾಸಾಗರದಲ್ಲಿ, ಆಫ್ರಿಕಾ ಖಂಡಕ್ಕೆ ಸೇರಿದ ಮಡಗಾಸ್ಕರ್ ಸನಿಹದ ಮಾರಿಷಸ್ ದ್ವೀಪಕ್ಕಷ್ಟೇ ಸೀಮಿತವಾಗಿತ್ತು ಅದರ ವಾಸ್ತವ್ಯ. ಮೂರು ಅಡಿ ಎತ್ತರದ, ಹತ್ತರಿಂದ ಇಪ್ಪತ್ತು ಕಿಲೋ ತೂಕದ ಈ ಹಕ್ಕಿಯದು ಕಂದು ಬಣ್ಣದ ಗರಿ ಪುಕ್ಕಗಳು, ಹಳದಿ ವರ್ಣದ ಪಾದಗಳು ಮತ್ತು ಹಿಂಬದಿಯಲ್ಲಿ ಗುಚ್ಛದಂತಹ ಗರಿಗಳ ಒಂದು ಪುಚ್ಛ ಕೂಡ. ಮಾನವರಹಿತವಾಗಿದ್ದ ಮಾರಿಷಸ್ ನಲ್ಲಿ ಡೋಡೋಗೆ ಯಾವ ನೈಸರ್ಗಿಕ ಶತ್ರುಗಳೂ ಇರಲಿಲ್ಲ. ಹಾಗಾಗಿ ಅದು 'ಹಾರದ ಹಕ್ಕಿ'ಯಾಗಿ, ನೆಲವಾಸಿಯಾಗಿ ನೆಮ್ಮದಿಯ ಬಾಳುವೆ ನಡೆಸಿತ್ತು .

ಮನುಷ್ಯರು ಡೋಡೋ ಗಳನ್ನು ಪ್ರಥಮವಾಗಿ ಕಂಡಿದ್ದು ಇಸವಿ 1598




ರಲ್ಲಿ. ಡೆನ್ಮಾರ್ಕ್ ನ ನಾವಿಕರ ತಂಡವೊಂದು ಆಕಸ್ಮಿಕವಾಗಿ ಆ ವರ್ಷ ಮಾರಿಷಸ್ ನಲ್ಲಿ ಕಾಲಿಟ್ಟಾಗ ಕಂಡ ಈ ಹಕ್ಕಿಗಳು ಅವರ 'ಊಟ 'ಕ್ಕೆ ಸುಲಭದ ತುತ್ತಾದುವು. ಮುಂದೆ ಅಲ್ಲೇ ನೆಲೆಸಲು ಬಂದಿಳಿದ ಮನುಷ್ಯರಿಗೆ ತಂತಾವೇ ಮುಗ್ಧವಾಗಿ, ನಿರ್ಭಯವಾಗಿ, ಕುತೂಹಲದಿಂದ ಸಮೀಪಕ್ಕೇ ಬಂದು ನಿಲ್ಲುತ್ತಿದ್ದ ಈ ಹಕ್ಕಿಗಳು ಬಲಿಯಾಗತೊಡಗಿದುವು. ಅಷ್ಟೇ ಅಲ್ಲದೆ ಮನುಷ್ಯರ ಜೊತೆ ಜೊತೆಗೇ ಬಂದು ಎಲ್ಲೆಡೆ ಹರಡಿದ ಮಂಗ, ಬೆಕ್ಕು , ಹಂದಿ, ಹೆಗ್ಗಣ ಇತ್ಯಾದಿ 'ಅನ್ಯ ಜೀವಿ'ಗಳಿಗೆ ಡೋಡೋಗಳ ಮೊಟ್ಟೆ ಮರಿಗಳು ತುತ್ತಾಗುತ್ತ ಒಟ್ಟಾರೆ ಈ ಬಹುವಿಧ ಅವ್ಯಾಹತ ಹಾವಳಿಗಳಿಂದ ಇಸವಿ 1662 ರ ವೇಳೆಗೆ, ಎಂದರೆ ಕೇವಲ 65 ವರ್ಷಗಳ ಅಲ್ಪ ಅವಧಿಯಲ್ಲೇ ಡೋಡೋಗಳು ಒಂದೂ ಇಲ್ಲದಂತೆ ನಿರ್ವಂಶವಾದುವು.

ಹಾಗಾಗಿ 'ಸರ್ವನಾಶಕ ಪ್ರಭೇದ' ಎಂದೇ ಹೆಸರು ಗಳಿಸಿರುವ 'ಆಧುನಿಕ ಮನುಷ್ಯರ' ಅಸೀಮ ವಿಧ್ವಂಸಕ ಶಕ್ತಿಯ ಸ್ಪಷ್ಟ ಸಂಕೇತವಾಗಿ ಡೋಡೋ ಉಳಿದಿದೆ. ಅದಕ್ಕೇ ಈ ಹಕ್ಕಿ ಪ್ರಸಿದ್ಧ.

■ ಎನ್. ವಾಸುದೇವ್